ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿಯವರು — ೧೯೬೬ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳ (ತಿದ್ದುಪಡಿ) ಶಾಸನದ ೧೫(೨)ನೇ ಕಲಮಿನ ಮೇರೆಗೆ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯೆಗಳು (ವಿಧಾನ ಮಂಡಲದ ಸದಸ್ಯರುಗಳಿಗೆ ಮೋಟಾರ್ ಕಾರ್ ಅಥವಾ ಮೊ ಟಾರ್ ಸೈಕಲ್ ಕೊಳ್ಳಲು ಮುಂಗಡ) ನಿಯಮ ೧೯೮೫ಕ್ಕೆ ಸಂಬಂಧಿಸಿದಂತೆ ೧೯೮೬ನೇ ಜನವರಿ ೧ರಂದು ಹೊರಡಿಸಲಾದ ೧ ಎಲ್‌ಎ ಎಲ್‌ಸಿ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಮನವಿಗಳನ್ನೊಪ್ಪಿಸುವುದು

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೆ, ಭದ್ರಾ ಅಣೆಕಟ್ಟೆಯ ನಿರ್ಮಾಣದಿಂದ ಮುಳುಗಡೆಯಾಗಿ ಶಿವಮೊಗ್ಗ ತಾಲ್ಲೂಕಿನ ಲಕ್ಕಿನಕೊಪ್ಪ ಮತ್ತು ತೋಟದಕೆರೆ ಪುನರ್ ವಸತಿಗೊಂಡ ಕೃಷಿ ಕುಟುಂಬಗಳಿಗೆ ಜಾರ್ಗಲ್ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸಿ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ಮನವಿಯನ್ನೊಪ್ಪಿಸುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.— ರಾಣೇಬೆನ್ನೂರು ತಾಲ್ಲೂಕಿನ ಹನುಮನಹಳ್ಳಿ–ಮುಂದ್ವೇನೂರು ಗ್ರಾಮಗಳ ನಡುವೆ ಇರುವ ಹಳ್ಳಕ್ಕೆ ಸೇತುವೆಯನ್ನು ಕಟ್ಟಿಸುವ ಬಗ್ಗೆ ಮನವಿಯನ್ನು ಮತ್ತು ರಾಣೇಬೆನ್ನೂರು ತಾಲ್ಲೂಕಿನ ಮೂಗೂಡ ಕ್ರಾಸಿನಿಂದ ಇಟಗಿ, ಮಂದೇನೂರು–ಮಾಕನೂರು ಕ್ರಾಸಿನವರೆಗೆ ರಸ್ತೆಯನ್ನು ದುರಸ್ತಿ ಮಾಡಿ ಡಾಂಬರೀಕರಣ ಮಾಡುವುದನ್ನು ಕುರಿತು ಮನವಿಯನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀ ಕೆ. ಕರುಣಾಲ್.—ಸುಳ್ಯ ತಾಲ್ಲೂಕಿನ ಅಯ್ಯನಕಟ್ಟೆ–ಚೊಕ್ಕಾಡಿ– ಬೆಂಗಮಲೆ ಪಿಡಬ್ಲ್ಯೂಡಿ ರಸ್ತೆಯ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಿ ಡಾಂಬರೀಕರಣ ಮಾಡಿಸುವುದರ ಬಗ್ಗೆ ಮನವಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮನವಿಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

೧. ಸ್ಟ್ಯಾಂಪ್ ಶುಲ್ಕ ವಿನಾಯಿತಿ ಮುಂದುವರಿಯದೇ ಇರುವುದರಿಂದ ರೈತರಿಗಾಗಿರುವ ತೊಂದರೆ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೆ, ಸ್ಟ್ಯಾಂಪ್ ಶುಲ್ಕದ ವಿನಾಯಿತಿ ನಿಯಮ ಮುಂದುವರೆಯದೆ ಇರುವುದರಿಂದ ರೈತರಿಗೆ ತೊಂದರೆಯಾಗಿರುವ ವಿಚಾರವನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತಂದು ಈ ಬಗ್ಗೆ ಉತ್ತರ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು). —

ರೈತರು ಸಾಲ ಪಡೆಯುವ ಸಂದರ್ಭದಲ್ಲಿ ೧೦ ಸಾವಿರ ರೂಪಾಯಿಗಳವರೆಗೆ ಸ್ಟ್ಯಾಂಪ್ ಶುಲ್ಕದಿಂದ ಪೂರ್ಣ ವಿನಾಯಿತಿ ಮತ್ತು ೧೦,೦೦೦–೦೦ ರೂ.ಗಳ ಹೆಚ್ಚಿನ ಸಾಲಕ್ಕೆ ಶೇಕಡ ೫೦ರಷ್ಟು ವಿನಾಯಿತಿಯ ಸೌಲಭ್ಯ ಸರ್ಕಾರದ ಆದೇಶ ಸಂಖ್ಯೆ ಆರ್.ಡಿ. ೧ ಇಎಸ್‌ಆರ್. ೮೪, ದಿನಾಂಕ ೮–೧–೧೯೮೪ರ ಪ್ರಕಾರ ದಿನಾಂಕ ೩೧–೧೨–೧೯೮೫ರ ವರೆಗೆ ಜಾರಿಯಲ್ಲಿತ್ತು. ಈ ಸೌಲಭ್ಯವನ್ನು ದಿನಾಂಕ ೧–೧–೧೯೮೬ರಿಂದ ಮುಂದುವರಿಸಬೇಕೆಂಬ ಉದ್ದೇಶವು ಸರ್ಕಾರಕ್ಕೆ ಇದ್ದು, ಇದನ್ನು ಪರಿಶೀಲಿಸಲಾಗುತ್ತಿದೆ ಹಾಗೂ ಶೀಘ್ರದಲ್ಲಿ ಈ ಬಗ್ಗೆ ಆದೇಶವು ಹೊರಡಿಸಲಾಗುವುದು. ಸರ್‌ಚಾರ್ಜನ್ನು ಕರ್ನಾಟಕ ಮುನಿಸಿಪಾಲಿಟಿಸ್ ಕಾಯಿದೆ ಮತ್ತು ಕರ್ನಾಟಕ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ಕಾಯಿದೆಯ ಮೇರೆಗೆ ವಿಧಿಸಲಾಗುತ್ತಿದೆ ಈಗಾಗಲೇ ೧೦,೦೦೦–೦೦ರೂ.